**<u>ದಿನಾಂಕ : *21-03-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : 2 ನೇ ಎದರುದಾರರ ಪರವಾಗಿ ಶ್ರೀ. ಆರ್.ಪಿ. ಕೆ. ವಕೀಲರಿಂದ,</u>**

ನನ್ನ ಅಣ್ಣ ಲಾರಿ ನಂ. ಕೆಎ-29 ಬಿ-6239 ಇದರ ಚಾಲಕ ಆಗಿದ್ದರು. ಅಪಘಾತವಾದ ದಿನ ನನ್ನ ಅಣ್ಣ ಸದರಿ ಲಾರಿಯನ್ನು ಚಲಾಯಿಸುತ್ತಿದ್ದರು. ದೂರನ್ನು ಭೀಮಪ್ಪ ಕೃಷ್ಣಪ್ಪ ದಂಡಿನ ಎನ್ನುವವರು ನೀಡಿರುತ್ತಾರೆ. ಭೀಮಪ್ಪ ರವರು ಎರಡು ಲಾರಿ ಚಾಲಕರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ದೂರು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಅಣ್ಣನ ತಪ್ಪು ಇರುವುದಿಲ್ಲ ಎಂದು ಹೇಳುತ್ತಾರೆ. ಪೋಲಿಸರು ತನಿಖೆಯನ್ನು ಮಾಡಿ ಇಬ್ಬರೂ ಚಾಲಕರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಅಣ್ಣನ ತಪ್ಪು ಇರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತವು ಸಂಪೂರ್ಣವಾಗಿ ನನ್ನ ಅಣ್ಣನ ತಪ್ಪಿನಿಂದ ಆಗಿದ್ದು, ಪೋಲಿಸರು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ತಮ್ಮ ಹಾತ್ ನಕಾಶೆಯಲ್ಲಿರಸ್ತೆಯ ಮದ್ಯ ಭಾಗದಲ್ಲಿ ಅಪಘಾತ ಆಗಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಸಾಕ್ಷಿದಾರರು 1 ನೇ ಎದರುದಾರರ ಚಾಲಕನು ನಮ್ಮ ಅಣ್ಣನ ಲಾರಿಗೆ ಡಿಕ್ಕಿ ಪಡಿಸಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಅಣ್ಣನ ತಪ್ಪು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ತಪ್ಪಿನಿಂದ ಅಪಘಾತ ಆಗಿದ್ದರಿಂದ 2 ನೇ ಎದರುದಾರರು ಪರಿಹಾರವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖೊಟ್ಟಿ ಬಿಲ್ಲುಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಮದುವೆ ಆಗಿರಲಿಲ್ಲ. ನನ್ನ ಮದುವೆ ಆಗಿರುವುದಿಲ್ಲ. ನನಗೆ ಮದುವೆ ಆಗಿದ್ದು, ನಾನು ನನ್ನ ಗಂಡನ ಮನೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನ ಮೇಲೆ ಅವಲಂಭಿತಳಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಆಸ್ಪತ್ರೆಯಿಂದ ಮನೆಗೆ ಬಂದಿದ್ದು ನಂತರ ಆರಾಮ ತಪ್ಪಿದ್ದರಿಂದ ದಿನಾಂಕ 26-09-2022 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಬೇರೆ ಕಾರಣಗಳಿಂದಾಗಿ ಮೃತ ಪಟ್ಟಿದ್ದು ಮತ್ತು ಅಪಘಾತದಿಂದಾಗಿ ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಅಪಘಾತದಲ್ಲಿ ತಲೆಗೆ, ಕೈ ಕಾಲಿಗೆ ಮತ್ತು ಮುಖಕ್ಕೆ ಪೆಟ್ಟಾಗಿತ್ತು. ನನ್ನ ಅಣ್ಣ ಮನೆಗೆ ಬಂದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಅಪಘಾತವಾದಾಗ 30 ವರ್ಷ

ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಡಿ ಎಲ್ ನ್ನು ಹಾಜರು ಪಡಿಸುತ್ತೇನೆ. ನನ್ನ ಅಣ್ಣನಿಗೆ ಪ್ರತಿ ತಿಂಗಳು 40 ಸಾವಿರ ರೂ. ಸಂಬಳ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. 1 ನೇ ಎದರುದಾರರ ಹತ್ತಿರ ನನ್ನ ಅಣ್ಣ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದರುದಾರರು ವಾಹನದ ದಾಖಲೆಗಳು ಸರಿ ಇರದೇ ಇರುವುದರಿಂದ 2 ನೇ ಎದುರುದಾರರು ಪರಿಹಾರವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. 3 ಮತ್ತು 4 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿಯಲ್ಲ. ನಾನು ಸದರಿ ಅರ್ಜಿಯನ್ನು 7 ತಿಂಗಳು ತಡವಾಗಿ ಹಚ್ಚಿರುವುದರಿಂದ ಪರಿಹಾರವನ್ನು ಪಡೆಯಲು ಭಾದ್ಯಸ್ತರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಎದರುದಾರರು, 3 ನೇ ಎದರುದಾರರು ಮತ್ತು 4 ನೇ ಎದರುದಾರರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂ

HANAMANTARAO R KULKARNI

Digitally signed by HANAMANTARAO R KULKARNI
Date: 2025.03.22 11:02:34 +0530